ಕರ್ನಾಟಕ ಸರ್ಕಾರ

ಡಿಸೆಂಬರ್ 12, 2016

## ಈದ್ ಮಿಲಾದ್ ಉನ್ ನಬಿ :
## ರಾಜ್ಯದ ಜನತೆಗೆ ಮುಖ್ಯಮಂತ್ರಿ ಶುಭಾಶಯ




**ಬೆಂಗಳೂರು, ಡಿಸೆಂಬರ್ 12:**

ಈದ್ ಮಿಲಾದ್ ಉನ್ ನಬಿ ಹಬ್ಬದ ಸುಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಜನತೆಗೆ, ವಿಶೇಷವಾಗಿ ಮುಸಲ್ಮಾನ ಬಾಂಧವರಿಗೆ, ಶುಭ ಕೋರಿದ್ದಾರೆ,

ಪ್ರವಾದಿ ಮಹಮದ್ ಪೈಗಂಬರ್ ಅವರ ಜನ್ಮ ದಿನದ ಸಂಭ್ರಮವನ್ನು ಸ್ಮರಣೆಗೆ ತರುವ ಈದ್ ಮಿಲಾದ್ ಉನ್ ನಬಿ ಹಬ್ಬವು ಪವಿತ್ರ ಕುರಾನ್‌ನ ಪಠಣ, ಪ್ರವಾದಿ ಮಹಮದ್ ಪೈಗಂಬರ್ ಅವರ ಅರ್ಥಪೂರ್ಣ ಸಂದೇಶಗಳ ಅನುಷ್ಠಾನ, ಬಂಧು-ಮಿತ್ರರೊಂದಿಗೆ, ವಿಶೇಷವಾಗಿ ಬಡವರೊಂದಿಗೆ, ಔತಣ ಹಾಗೂ ಕೊಡುಗೆಗಳ ವಿನಿಮಯ ಇವೆಲ್ಲಕ್ಕೂ ಅತ್ಯುತ್ತಮ ವೇದಿಕೆಯನ್ನು ಕಲ್ಪಿಸಲಿದೆ ಎಂದು ಸಿದ್ದರಾಮಯ್ಯ ಅವರು ಬಣ್ಣಿಸಿದ್ದಾರೆ.

ಅಲ್ಲದೆ, ಈದ್ ಮಿಲಾದ್ ಉನ್ ನಬಿ ಸಂಭ್ರಮವು ಎಲ್ಲರಲ್ಲೂ ಸೋದರತೆ ಹಾಗೂ ಸೌಹಾರ್ಧತೆಯ ಮೂಡಿಸಲು ಪ್ರೇರಣೆ ಹಾಗೂ ಸ್ಫೂರ್ತಿಯನ್ನು ನೀಡಲಿ ಎಂದು ಮುಖ್ಯಮಂತ್ರಿ ತಮ್ಮ ಸಂದೇಶದಲ್ಲಿ ಹಾರೈಸಿದ್ದಾರೆ.

*******

ಡಿ ಪಿ ಎಂ